## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

## ಸಿ. ಸಿ. ನಂ. 1196/2021

| | | | |
|---|---|---|---|
| ಸಾಕ್ಷಿಧಾರರ ಹೆಸರು | : | ಫಾರೂಕ್ ಅಹ್ಮದ ಅಕ್ಕಿವಳ್ಳಿ | ಪಿಡಬ್ಲ್ಯೂ 1 |
| ತಂದೆಃಗಂಡನ ಹೆಸರು | : | ಮಹ್ಮದಗೌಸ | ಸಿಡಬ್ಲ್ಯೂ 4 |
| ವಯಸ್ಸು | : | 52 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ದರ್ಗಾ ಹಾನಗಲ್ಲ | |

ದಿನಾಂಕ 23-07-2024 ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ

ಚಾಸಾ-1 ಮತ್ತು 2 ರವರ ಪರಿಚಯ ಇದೆ. ಚಾಸಾ-3 ರವರು ಮೃತ ಪಟ್ಟಿರುತ್ತಾರೆ. ಚಾಸಾ-5 ರಿಂದ 35 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇದೆ. ಸನ್ 2010-11 ರಲ್ಲಿ 1, 6, 8, 13, 18, 22, 24, ಮಹ್ಮದ ಸಾಧಿಕ್ ಅಬ್ದುಲ್ ಖಾದರ ಮುಲ್ಲಾ ಮತ್ತು 29 ನೇ ಆರೋಪಿ ಮತ್ತು ಇತರರು ಒಂದು ಟ್ರಸ್ಟ್ ಮಾಡಿಕೊಂಡಿದ್ದೇವೆ ಅಂತಾ ಹೇಳಿ ದರ್ಗಾದ ಒಳಗಡೆ ಬಂದು ಅದರ ನಕಲನ್ನು ಹಚ್ಚಿ ಟ್ರಸ್ಟ್ ಹೇಳಿದಂತೆ ನೀವು ಕೇಳಬೇಕು ಅಂತಾ ತಿಳಿಸಿ ಇದು ನಮ್ಮ ದರ್ಗಾ ಇದ್ದು ಟ್ರಸ್ಟ್ ಹೇಳಿದಂತೆ ಕೇಳಬೇಕು ಅಂತಾ ಹೇಳಿ ಟ್ರಸ್ಟ ಆಧಾರದ ಮೇಲೆ ಸುಮಾರು 40 ಎಕರೆ ದರ್ಗಾದ ಆಸ್ತಿಯನ್ನು 1 ನೇ ಆರೋಪಿ, ಅನ್ವರಬಾಷಾ ಮಕಾಂದಾರ, ಪರವೀನ ಬಾನು ಮಕಾಂದಾರ, ಗೌಸಮೋದಿನ ಮಕಾಂದಾರ, ಸಯ್ಯದಪಾಷಾ ಮಕಾಂದಾರ, ಸೈದುಮಿಯ್ಯಾ ಮಕಾಂದಾರ, ಮಹ್ಮದ ಹಯಾತ್ ಮಕಾಂದಾರ ಅಂದಾಜು 20 ಜನರ ಹೆಸರಿಗೆ ಖಾತಾ ಬದಲಾವಣೆ ಮಾಡಿಕೊಂಡರು ನಾವು ಇದಕ್ಕೆ ವಕ್ಫ ಬೋರ್ಡ್ ಮುಂದೆ ತಕರಾರು ಸಲ್ಲಿಸಿದೇವು. ವಕ್ಫ ಬೋರ್ಡ್ ನವರು 11 ಜನರ ಕಮೀಟಿ ರಚನೆ ಮಾಡಿ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದರು. ದಿನಾಂಕ 25.03.2019 ರಂದು ಸಂಜೆ 07.00 ಗಂಟೆಗೆ ನಾವು ಊರುಸು ಮಾಡುತ್ತೇವೆ ಅಂತಾ ಆರೋಪಿತರು ಬಂದು ಗಲಾಟೆ ಮಾಡಿದರು. ದಿನಾಂಕ 26.03.2019 ರಂದು ಬೆಳಿಗ್ಗೆ 04.30 ಸುಮಾರಿಗೆ ಆರೋಪಿತರು ಸಿಕ್ಕಾಪಟ್ಟೆ ಬೈಯಲು ಪ್ರಾರಂಭಿಸಿದರು. ಸರ್ವರ್ ಬಾಷಾ ಮಕಾಂದಾರ, ಅಲ್ತಾಫ್ ಅಹ್ಮದ

ಮಕಾಂದಾರ, ಜೈನುಲ್ಲಾಬುದ್ದೀನ ಮಕಾಂದಾರ, ಮಹ್ಮದ ಸಾಧಿಕ್ ಮಕಾಂದಾರ, ಅಹ್ಮದ ರಜಾಕ್ ಮಕಾಂದಾರ ಮತ್ತು ಪರವೀನಬಾನು ಮಕಾಂದಾರ, ಬೀಬಿ ಆಯಿಷಾ ಇನ್ನಿತರರು ಸೇರಿ ಗಲಾಟೆ ಮಾಡಿ ಹೆಣ್ಣು ಮಕ್ಕಳಿಂದ ಕಲ್ಲನ್ನು ದರ್ಗಾದ ಒಳಗೆಡೆ ಎಸೆಯಿಸಿದರು.

2. 1 ಮತ್ತು 2 ನೇ ಆರೋಪಿತರು ಬಡಿಗೆ ಮತ್ತು ಕಬ್ಬಿಣದ ರಾಡನ್ನು ತೆಗೆದುಕೊಂಡು ಬಂದಿದ್ದರು ಚಾಸಾ-1 ರವರಿಗೆ 1 ನೇ ಆರೋಪಿ ತಲೆಗೆ ಮುಖಕ್ಕೆ ಹೊಡೆದರು. ಅಲ್ತಾಫ್ ಹುಸೇನ ಚಾಸಾ-1 ರವರಿಗೆ ಬಡಿಗೆಯಿಂದ ಹೊಡೆದರು. ಬೇರೆ ಉಳಿದ ಜನರಿಗೆ ಗಾಯಗಳಾದವು. ಉಳಿದ ಭಕ್ತಾದಿಗಳು ಬಂದು ಗಲಾಟೆಯನ್ನು ಬಿಡಿಸಿದರು. ಬೋಸಡಿ ಮಗನೆ, ಚಿನಾಲಿ ಮಗನೆ ಅಂತಾ 1, 22, 23 ನೇ ಆರೋಪಿತರು ಬೈದರು. ಅಹ್ಮದ ರಜಾ ಸಯ್ಯದ ಪಾಷಾ ಮಕಾಂದಾರ ಕಬ್ಬಿಣದ ರಾಡಿನಿಂದ ಚಾಸಾ-1 ರವರಿಗೆ ಹೊಡೆದರು ಹಾಗೂ ಆರೋಪಿತರು ಜೀವ ಬೆದರಿಕೆಯನ್ನು ಸಹ ನೀಡಿರುತ್ತಾರೆ. ಗಾಯಾಳುಗಳನ್ನು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ನಂತರ ಚಾಸಾ-1 ರವರು ದೂರು ಸಲ್ಲಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ 7 ಬಡಿಗೆ ಮತ್ತು 2 ಸಲಾಕೆಗಳನ್ನು ಗುರುತಿಸಿದ್ದು ಅವುಗಳನ್ನು ಮು ಮಾ 1 ರಿಂದ 9 ಎಂದು ಗುರುತಿಸಲಾಯಿತು. ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

: ಪಾಟೀ ಸವಾಲು : ಸಹಾಯಕ ಸರಕಾರಿ ಅಭಿಯೋಜಕರಿಂದ

3. ಮಧ್ಯ ರಾತ್ರಿ 12.45 ಗಂಟೆಗೆ ಗಲಾಟೆ ಶುರುವಾಯಿತು ಎಂದರೆ ಸರಿ. ಚಾಸಾ-1 ರವರಿಗೆ 1 ನೇ ಆರೋಪಿ ಮತ್ತು ಅಬ್ದುಲ್ ರೆಹಮಾನ ಸಲಾಕೆಯಿಂದ ಎದೆಗೆ, ತಲೆಗೆ ಮತ್ತು ಮೈ ಕೈ ಹೊಡೆದು ಗಾಯಗೊಳಿಸಿದರು ಮತ್ತು ಮೂಗಿನಿಂದ ರಕ್ತ ಸ್ರಾವ ಆಯಿತು ಎಂದರೆ ಸರಿ.

ಪಾಟೀ ಸವಾಲು : 1, 3 ರಿಂದ 52 ಆರೋಪಿತರ ಪರ ಶ್ರೀ. ಐ ಕೆ ಹೆಚ್ ವಕೀಲರಿಂದ

ಟ್ರಸ್ಟ್ ನ ಕಾಪಿ ಪ್ರತಿಯನ್ನು ಪೋಲಿಸರಿಗೆ ಕೊಟ್ಟಿಲ್ಲ. ದರ್ಗಾದಲ್ಲಿ ಟ್ರಸ್ಟ್ ಕಾಪಿ ನಕಲನ್ನು ಹಚ್ಚಿದ್ದನ್ನು ಪೋಟೋವನ್ನು ಪೋಲಿಸ್ ಠಾಣೆಗೆ ನೀಡಿಲ್ಲ. ನಾನು ದರ್ಗಾದಲ್ಲಿ ಟ್ರಸ್ಟ್ ಕಾಪಿ ನಕಲನ್ನು ಹಚ್ಚಿ ನಿಯಮಗಳನ್ನು ಪಾಲಿಸಲು ತಿಳಿಸಿದ ಬಗ್ಗೆ ಹೇಳಿಕೆ ಹೇಳಿ ಬರೆಯಿಸಿದ್ದೇನೆ. ನಾನು ನನ್ನ ಹೇಳಿಕೆಯಲ್ಲಿ ಟ್ರಸ್ಟ್ ಕಾಪಿ ಹಚ್ಚಿ ನಿಯಮಗಳನ್ನು ಪಾಲಿಸಲು ತಿಳಿಸಿದ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿಕೆಯಲ್ಲಿ 40 ಎಕರೆ ಸರಕಾರ ಆಸ್ತಿ ಅಂತಾ ಹೇಳಿದ್ದೆ ಪೋಲಿಸರು ಬರೆದುಕೊಂಡಿದ್ದಾರೆ ಎಂಬುದು ಗೊತ್ತಿಲ್ಲ. ಮೌಲಾಬಕ್ಷ ಹಯಾತ್ ಮಿಯಾ ಮಕಾಂದಾರ ರವರು ಸಾಂಪ್ರದಾಯಕವಾಗಿ ಮೊದಲಿನಿಂದಲೂ ಮುತವಲ್ಲಿ ಕೆಲಸ ಮಾಡುತ್ತಾ ಬಂದಿದ್ದರು ಎಂದರೆ ಸರಿ. ಮೌಲಾಬಕ್ಷ ಹಯಾತ್ ಮಿಯಾ ಮಕಾಂದಾರ ರವರು 1 ನೇ ಆರೋಪಿಯ ಅಜ್ಜನ ತಮ್ಮ ಎಂದರೆ ಸರಿಯಲ್ಲ. ಮೌಲಾಬಕ್ಷ ಹಯಾತ್ ಮಿಯಾ ಮಕಾಂದಾರ ರವರಿಗೆ 1968 ರಲ್ಲಿ 3 ಜಮೀನುಗಳನ್ನು ಇನಾಮ್ ಅಂತಾ ನೀಡಲಾಯಿತು ಎಂದರೆ ಸರಿಯಲ್ಲ. ಸಾಕ್ಷಿಯು ದರ್ಗಾಕ್ಕೆ ಇನಾಮ್ ಅಂತಾ ಕೊಡಲಾಯಿತು ಅಂತಾ ನುಡಿಯುತ್ತಾರೆ. 1968 ಪೂರ್ವದಿಂದಲೂ ಮಕಾಂದಾರ ಕುಟುಂಬದವರೆ ಮುತವಲ್ಲಿ ಯಾಗಿ ಬಂದಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿಗೆ ವಂಶ ಪಾರಂಪರಿಕ ಮುತವಲ್ಲಿ ಅಂತಾ ವಕ್ಫ ಬೋರ್ಡಿನವರು ಆದೇಶ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆದೇಶವನ್ನು ಪ್ರಶ್ನಿಸಿದ್ದಕ್ಕೆ 2015 ರಲ್ಲಿ ಕಮೀಟಿಯನ್ನು ನೇಮಕ ಮಾಡಿರುತ್ತಾರೆ. ಕಮೀಟಿ ನೇಮಕ ಮಾಡಿದ್ದನ್ನು 1 ನೇ ಆರೋಪಿಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ W.P No. 105440/2016 ನ್ನು ಮಾಡಿದ್ದರು ಎಂದರೆ ಸರಿ. ಸಾಕ್ಷಿಯು ಅದು ನಮ್ಮ ಪರವಾಗಿ ಆದೇಶವಾಗಿದೆ ಎಂದು ನುಡಿಯುತ್ತಾರೆ.

4. W.P No. 102614/2019 ನೇ ದ್ದರಲ್ಲಿ ನಾವು 1 ನೇ ಆರೋಪಿಗೆ ದರ್ಗಾದ ಪೂಜೆ ಮಾಡುವ ಕೆಲಸಕ್ಕೆ ಅಡೆತಡೆ ಮಾಡಬಾರದೆಂದು ಮಧ್ಯಂತರ ಆದೇಶ ಆಗಿತ್ತು ಎಂದರೆ ಸರಿಯಲ್ಲ. ಸದರಿ ಆದೇವನ್ನು ನಾನು ಉಲ್ಲಂಘನೆ ಮಾಡಿದ್ದೇನೆ ಅಂತಾ ಕಂಟೆಂಪ್ಟ್ ಕೇಸ್ ನ್ನು ನನ್ನ ವಿರುದ್ಧ 1 ನೇ ಆರೋಪಿ ಮಾಡಿದ್ದರು ಎಂದರೆ ಸಾಕ್ಷಿಯು ಅದರಲ್ಲಿ

ನನಗೆ ಬಿಡುಗಡೆ ಆಯಿತು ಅಂತಾ ನುಡಿಯುತ್ತಾರೆ. ಸದರಿ ಕಂಟೆಂಪ್ಟ್ ಕೇಸಿನಲ್ಲಿ ನನಗೆ ಶಿಕ್ಷೆ ಆಯಿತು ಎಂದರೆ ಸರಿಯಲ್ಲ. ನಾನು ಬೇಶರತ್ ಕ್ಷಮಾಪಣೆ(ಅನ್ ಕಂಡಿಷನಲ್) ಸಲ್ಲಿಸಿದ ಮೇರೆಗೆ ನನಗೆ ಒಂದು ದಿನದ ಶಿಕ್ಷೆ ಆಯಿತು ಎಂದರೆ ಸರಿಯಲ್ಲ.

**5.** ಸದರಿ ಗಲಾಟೆಯಲ್ಲಿ ತುರಿದ ಕಲ್ಲುಗಳನ್ನು ಪೋಲಿಸರು ಜಪ್ತ ಪಡಿಸಿಕೊಂಡಿರುತ್ತಾರೆ. ಅವು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ಪರವೀನಬಾನು, ಬೀಬಿಆಯಿಷಾ ಮತ್ತು ಇತರೇ ಮಹಿಳೆಯರು ಕಲ್ಲು ಎಸೆದಿದ್ದಾರೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದರ್ಗಾದ ಮುಂದಿನ ಬಾಗಿಲ ಮುಂದೆ ಕಲ್ಲುಗಳನ್ನು ಎಸೆದಿರುತ್ತಾರೆ. ನಾನು ಆ ರೀತಿ ನನ್ನ ಹೇಳಿಕೆಯನ್ನು ನೀಡುವಾಗ ಹೇಳಿರುತ್ತೇನೆ. ಯಾವ ಭಾಗದಿಂದ ಹಿಡಿದು ಯಾವ ಬಡಿಗೆ ಯಿಂದ ಹೊಡೆದರು ಅಂತಾ ಖಚಿತವಾಗಿ ಹೇಳಲು ಬರುವುದಿಲ್ಲ. ಮು ಮಾ **1** ರಿಂದ **9** ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಚಾಸಾ-**1** ರವರಿಗೆ ಯಾವುದೇ ವಸ್ತುವಿನಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. **1, 22 ,23, 27** ನೇ ಆರೋಪಿಯು ಚಾಸಾ-**1** ರವರಿಗೆ ಯಾವುದೇ ವಸ್ತುವಿನಿಂದ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಬೋಸಡಿ ಮಗನೆ ಮತ್ತು ಚಿನಾಲಿ ಮಗನೆ ಅಂತಾ ಆವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಾನು ಆ ರೀತಿ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ ಆದರೆ ಪೋಲಿಸರು ಬರೆದಿರುವುದಿಲ್ಲ. ಬ್ರೀಟಿಷರ ಕಾಲದಿಂದಲೂ ಮಕಾಂದಾರ ಕುಟುಂಬದವರು ಹಾನಗಲ್ಲ ದರ್ಗಾದ ಉರುಸು ಮಾಡಿ ಓದಿಕೆ ಮಾಡಿ ಗಂಧದ ಲೇಪನ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದರ್ಗಾಕ್ಕೆ ಸಾವಿರಾರು ಕ್ತರಿಂದ ಸಾಕಷ್ಟು ಕಾಣಿಕೆ ಮತ್ತು ಹಣದ ಆದಾಯ ಬರುತ್ತದೆ ಎಂದರೆ ಸರಿ. ಸದರಿ ಆದಾಯದ ಮೇಲೆ **1** ನೇ ಆರೋಪಿಯ ಕುಟುಂಬ ಅವಲಂಬಿತವಾಗಿದೆ ಎಂದರೆ ಸರಿಯಲ್ಲ. ಸರಕಾರಕ್ಕೆ ತುಂಬಬೇಕಾದ ತೆರಿಗೆಯನ್ನು ತುಂಬುತ್ತಿಲ್ಲ. ದರ್ಗಾಕ್ಕೆ ಆದಾಯವನ್ನು ಪಡೆಯುವ ಉದ್ದೇಶದಿಂದ ನಾನು **1** ನೇ ಆರೋಪಿಗೆ ಮತ್ತು ಅವರ ಕುಟುಂಬದವರಿಗೆ ತೊಂದರೆ ಕೊಡುತ್ತಾ ಬಂದಿದ್ದೇನೆ ಎಂದರೆ ಸರಿಯಲ್ಲ. ನಾವು ದರ್ಗಾದ ಉಸ್ತುವಾರಿಗೆ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾವು ಭಕ್ತರು ಮಾತ್ರ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಾಕ್ಷಿಯು ಸುಳ್ಳು ಸಾಕ್ಷಿ ಇದೆ ಎಂದರೆ ಸರಿಯಲ್ಲ.

**ಆರೋಪಿತರು ಆವಾಚ್ಯ ಶಬ್ದಗಳಿಂದ ಬೈದಿಲ್ಲ ಯಾವುದೇ ಜೀವ ಬೆದರಿಕೆಯನ್ನು ಹಾಕಿಲ್ಲ ಎಂದರೆ ಸರಿಯಲ್ಲ. ಹೇಳಿಕೆ ನೀಡಿದ ದಿನಾಂಕ ನೆನಪಿರುವುದಿಲ್ಲ. ಆ ದಿನ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.**

**<u>ಪಾಟೀ ಸವಾಲು : 2 ಆರೋಪಿ ಪರ ಶ್ರೀ. ಜಿ ಹೆಚ್ ಬಿ ವಕೀಲರಿಂದ</u>**

**2 ನೇ ಆರೋಪಿತರ ಪರ ವಕೀಲರನ್ನು ಕರೆಯಲಾಯಿತು ಗೈರು ಹಾಜರಿ, ಕಾರಣ 2 ನೇ ಆರೋಪಿತರ ಪರ ಪಾಟೀ ಸವಾಲನ್ನು ಮುಂದೂಡಲಾಯಿತು.**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್